# ಸ್ವಸ್ಥತಾ ಸೇವೆಯ ಆರಾಧನಾ ಕ್ರಮ
# ಭಾನುವಾರ–ಫೆಬ್ರವರಿ 12, 2017

**ಮುಖ್ಯ ಪ್ರಸ್ತಾಪ : ಸಭೆಯ ಸ್ವಸ್ಥತಾ ಸೇವೆಯಲ್ಲಿ ಒಟ್ಟಿಗೆ ಪಾಲುದಾರಿಕೆಯ ಸೇವೆ ಸಲ್ಲಿಸುವುದು.**

**1. ಆರಾಧನೆಗೆ ಕರೆ :**

ಬೆಳೆಯು ಬಹಳ, ಆದರೆ ಕೆಲಸದವರು ಕಡಿಮೆ: ದೇವರು ಕೆಲಸದವರನ್ನು ಕಳುಹಿಸುವಂತೆ ಪ್ರಾರ್ಥಿಸೋಣ, ಮತ್ತು ದೇವರು ಸಭೆಯಲ್ಲಿ ಮೊದಲು ಅಪೋಸ್ತಲರು. ಎರಡನೆಯದಾಗಿ ಪ್ರವಾದಿಗಳು ಮೂರನೆಯದಾಗಿ ಶಿಕ್ಷಕರು (ಗುರುಗಳು) ನಂತರ ಅದ್ಭುತಕಾರ್ಯಗಳನ್ನು ಮಾಡುವವರು, ವಾಸಿ (ಸ್ವಸ್ಥತೆ) ಮಾಡುವವರು, ಸಹಾಯಕರು, ಕಾರ್ಯನಿರ್ವಾಹಕರು, ಸಂದೇಶಕರನ್ನು ನೇಮಿಸಿದ್ದಾನೆ, ನಾವು ದೇವರ ಜೊತೆ ಕೆಲಸದವರು. ನೀನು ದೇವರ ಜಮೀನು, ದೇವರ ಕಟ್ಟಡ.

**2. ಸ್ವಾಗತ :**

ಸ್ವಸ್ಥತಾ ಸೇವೆಯ ಭಾನುವಾರದ ಆರಾಧನೆಗೆ ತಮ್ಮೆಲ್ಲರನ್ನು ಪ್ರಭು ರಕ್ಷಕನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಸ್ವಾಗತಿಸುತ್ತೇವೆ. ಸೃಷ್ಟಿಕರ್ತನಾದ ದೇವರು ಕ್ರಿಸ್ತನ ಅಂಗಗಳಾದ ಪ್ರತಿಯೊಬ್ಬರಾದ ನಾವು ಆತನ ಸ್ವಸ್ಥತೆಯನ್ನು ಜ್ಞಾಪಿಸಿಕೊಂಡು ಆಚರಿಸುವಂತೆ ಈ ದಿನವು ಪ್ರತ್ಯೇಕವಾಗಿ ನೇಮಿಸಲ್ಪಟ್ಟಿದೆ.

**3. ಆರಂಭ ಪ್ರಾರ್ಥನೆ :**

ಸರ್ವಶಕ್ತನಾದ ದೇವರೇ, ನಮ್ಮ ಜೀವದ ಮೂಲನೇ. ನಿನ್ನ ಸೃಷ್ಟಿಯ ಸ್ವಸ್ಥತೆಗಾಗಿ ಕೆಲಸಮಾಡುವವರು ಹಾಗೂ ನೆರವಾಗುವವರಿಗಾಗಿ ನಿನ್ನನ್ನು ಸ್ತುತಿಸಲು ಹಾಗೂ ವಂದಿಸಲು ಕೊಟ್ಟಂಥ ಈ ವಿಶೇಷ ಸಂದರ್ಭಕ್ಕಾಗಿ ನಾವು ನಿನ್ನನ್ನು ವಂದಿಸುತ್ತೇವೆ. ನಿನ್ನ ಸ್ವಸ್ಥತೆಯ ಬಹುಮಾನವನ್ನು ನಾವು ಒಬ್ಬರಿಗೊಬ್ಬರು ಹಂಚಿಕೊಳ್ಳುವಂತೆ ಕೃಪೆ ಮಾಡಿದ್ದಕ್ಕಾಗಿ ವಂದನೆಸಲ್ಲಿಸುತ್ತೇವೆ. ನಿನ್ನ ಜನರು ಸ್ವಸ್ಥತೆ ಹಾಗೂ ಪರಿಪೂರ್ಣತೆಯ ಅನುಭವವನ್ನು ಪಡೆಯುವಂತೆ ಸಹಾಯಮಾಡುವವರ ಹಸ್ತಗಳನ್ನು ಬಲಪಡಿಸಿ ಸದಾ ಕಾಯುವವನಾಗಿದ್ದ ಅದಕ್ಕಾಗಿ ನಿನ್ನನ್ನು ವಂದಿಸುತ್ತೇವೆ. ಬಿಗಿ ಹಿಡಿತದ ಜೀವನದಲ್ಲಿ ಬರುವ ಸವಾಲುಗಳನ್ನು ಎದುರಿಸಲು



ಅರ್ಥಮಾಡಿಕೊಳ್ಳಲು ಕಷ್ಟಪಡುವವರಿಗೆ ಸಹಾಯ ಮಾಡುವಂತೆ ಈ ನಿನ್ನ ಸಭೆಯನ್ನು ಆಶೀರ್ವದಿಸು. ಈ ಸ್ವಸ್ಥತಾ ಸೇವೆಯಲ್ಲಿ ನೀನು ನಮ್ಮನ್ನು ಸೃಷ್ಟಿಸಿದ ಉದ್ದೇಶವನ್ನು ಪರಿಪೂರ್ಣಗೊಳಿಸುವಂತೆ ಪ್ರತಿಯೊಬ್ಬರನ್ನು ಬಲಗೊಳಿಸಿ ನಡೆಸಲೆಂದು ಬೇಡುತ್ತೇವೆ.

- ನಾವು ಜೊತೆಯಾಗಿ ಭಾಗಿಗಳಾಗಿ ಸೇವೆ ಸಲ್ಲಿಸುವಾಗ ಈ ಜಗತ್ತು ಜೀವಿಸಲು ಆಶೀರ್ವಾದದಾಯಕವಾಗಿ ಮಾಡುವಂತೆ ನಮಗೆ ಸಹಾಯ ಮಾಡು, ಸಭೆಯ ಸ್ವಸ್ಥತಾಸೇವೆಯನ್ನು ಅಭಿವೃದ್ಧಿ ಪಡಿಸುವಲ್ಲಿ ನಾವು ಮಾಡುವಂಥ ಎಲ್ಲ ಪ್ರಯತ್ನಗಳಲ್ಲಿ ನಿನ್ನ ಆಶೀರ್ವಾದ ಸದಾ ನಮ್ಮ ಮೇಲೆ ಇರಲಿ. ನಿನ್ನ ಪ್ರಸನ್ನತೆಯಿಂದ ನಮ್ಮನ್ನು ಸತತವಾಗಿ ಅಭಿವೃದ್ಧಿಗೊಳಿಸು. ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುತ್ತೇವೆ. ಆಮೆನ್.

**4. ಆರಂಭ ಸಂಗೀತ:**

**5. ಅಪೋಸ್ತಲರ ವಿಶ್ವಾಸ ಸೂತ್ರ/ನೈಸೀಯ ವಿಶ್ವಾಸ ಸೂತ್ರ/ಕೃತಜ್ಞತಾ ಪ್ರಾರ್ಥನೆ/ ಪಾಪದರಿಕೆ ಮತ್ತು ಪಾಪ ಕ್ಷಮಾಪಣೆ (ಆರಾಧನಾ ಕ್ರಮಕ್ಕನುಸಾರವಾಗಿ).**

**6. ಸತ್ಯವೇದ ಪಾರಾಯಣ:**

| | | |
|---|---|---|
| ಮೊದಲ ಪಾರಾಯಣ | : | ಕೀರ್ತನೆಗಳು 43 : 1 - 5 |
| ಎರಡನೇ ಪಾರಾಯಣ | : | ಎಫೆಸದವರಿಗೆ 4 : 1, 11 –16 |
| ಮೂರನೆಯ ಪಾರಾಯಣ | : | ಮುಕ್ತಾಯ 16 : 15 –20 |

**7. ಸ್ವಸ್ಥತಾ ಸೇವೆಯ ಪರಿಚಯ :**

ಯೇಸು ಕ್ರಿಸ್ತನ ಸ್ವಸ್ಥತಾ ಸೇವೆಯು ಆತನು ತೋರಿದ ಕರುಣೆಯ ಮೇಲೆ ಆಧಾರಿತವಾಗಿದೆ. ಪ್ರತಿಯೊಬ್ಬರೂ ಸಮೃದ್ಧ ಜೀವನವನ್ನು ಹೊಂದಬೇಕೆಂದು ಆತನು ಆಶಿಸುತ್ತಾನೆ. ಸ್ವಸ್ಥತೆಯು ಹಲವು ಕವಲುಗಳಿಂದ ಮತ್ತು ಆತ್ಮೀಕ, ಮಾನಸಿಕ, ದೈಹಿಕ, ಭಾವೋದ್ರೇಕ, ಹಾಗೂ ಸಾಮಾಜಿಕ ಸ್ವಸ್ಥತೆಯನ್ನು ಒಳಗೊಂಡಿದೆ. ನಮ್ಮ ಪ್ರಭು ಹಾಗೂ ರಕ್ಷಕನಾದ ಯೇಸು ಕ್ರಿಸ್ತನು ಪ್ರತಿ ಸ್ವಸ್ಥತೆಯ ಆರಂಭದಿಂದ ಕೊನೆಯವರೆಗೂ ಇರುವ ಮೂಲವಾಗಿದ್ದಾನೆ. ಭಾರತದಲ್ಲಿ ಸ್ವಸ್ಥತಾ ಸೇವೆ ಕ್ರಿ.ಶ.1905ರಲ್ಲಿ ಮೆಡಿಕಲ್ ಮಿಶನರಿ ಅಸೋಸಿಯೇಶನ್ (ಎಂ.ಎಂ.ಎ) ಎಂಬ ಮಿಶನರಿಗಳ ಸಂಘದಿಂದ ಆರಂಭವಾಗಿ ಕ್ರಿ.ಶ.1926ರಲ್ಲಿ ಕ್ರಿಶ್ಚಿಯನ್ ಮೆಡಿಕಲ್ ಅಸೋಸಿಯೇಶನ್ ಆಫ್ ಇಂಡಿಯಾ, ಎಂಬುದಾಗಿ ಮರುನಾಮಕರಣ

ಹೊಂದಿತು. ಇಂದು ಭಾರತದಲ್ಲಿ ಸಿ.ಎಂ.ಎ.ಐ ಯು 300 ಕ್ರೈಸ್ತ ಮಿಶನ್ ಆಸ್ಪತ್ರೆಗಳನ್ನು ಹೊಂದಿದ್ದು. ಅದರಲ್ಲಿ ಲೂದಿಯಾನ ಹಾಗೂ ವೆಲ್ಲೂರಿನಲ್ಲಿ ಎರಡು ಪ್ರತಿಷ್ಠಿತ ವೈದ್ಯಕೀಯ ಕಾಲೇಜುಗಳನ್ನು ಹೊಂದಿದೆ. ಅಲ್ಲದೆ ಹತ್ತು ಸಾವಿರ ಪ್ರತಿಷ್ಠಿಸಲ್ಪಟ್ಟ ಕ್ರೈಸ್ತ ಆರೋಗ್ಯ ವೃತ್ತಿಪರರನ್ನು ಸ್ವಸ್ಥತೆಯ ಸೇವೆಯಲ್ಲಿ ಒಟ್ಟುಗೂಡಿಸುತ್ತದೆ. ಇದು ದಿನದಿಂದ ದಿನಕ್ಕೆ ಬೆಳೆಯುತ್ತ ವಿವಿಧ ರೀತಿಯ ಆರೋಗ್ಯ ಸೇವೆಯಲ್ಲಿ ತನ್ನ ಕೊಡುಗೆ ನೀಡುತ್ತಿದೆ. ಸಿ.ಎಂ.ಎ.ಐ ಸದಸ್ಯರು ಪ್ರಥಮವಾಗಿ ಲೆಪ್ರಸಿ, ಟಿ.ಬಿ, ಮಲೇರಿಯಾ ಹಾಗೂ ಹೆಚ್.ಐ.ವಿ/ಏಡ್ಸ್ ಈ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಸಿ.ಎಂ.ಎ.ಐ ಯು ಭಾರತದ ಕ್ರಿಸ್ತ ಸಭೆಗಳಲ್ಲಿ ಸ್ವಸ್ಥತಾ ಸೇವೆಯಲ್ಲಿ ಸಹಾಯ ಮಾಡುವುದಲ್ಲದೆ ಕ್ರಿಸ್ತನ ಪ್ರೀತಿ ಹಾಗೂ ಆಜ್ಞೆಗೆ ಪ್ರತಿಯಾಗಿ ನೀತಿಯುತವಾದ ಹಾಗೂ ಆರೋಗ್ಯದಾಯಕ ಸಮಾಜ ಕಟ್ಟುವಲ್ಲಿ ಸಹಾಯ ಮಾಡುತ್ತಿದ್ದೆ.

**8. ಸಂದೇಶ ರೂಪರೇಖೆ:**

**ಮುಖ್ಯ ಪ್ರಸ್ತಾಪ :** ಸಭೆಯ ಸ್ವಸ್ಥತಾ ಸೇವೆಯಲ್ಲಿ ಒಟ್ಟಿಗೆ ಪಾಲುದಾರಿಕೆಯ ಸೇವೆ ಸಲ್ಲಿಸುವುದು.

"ಮತ್ತು ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನೆಂದರೆ–ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು: ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು (ಮುಕ್ತಾಯ 16:15–20)

**ಪೀಠಿಕೆ:**

ಸ್ವಸ್ಥತೆ ಹಾಗೂ ಉದ್ದೇಶ, ಬಲ ಮತ್ತು ಸಾಮರ್ಥ್ಯವನ್ನು ಅರ್ಹತೆಯಾಗಿ ಹೊಂದಲು ನಾವು ಕ್ರಿಸ್ತನ ಶರೀರ ಎಂಬ ಸಭೆಯಲ್ಲಿ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಬೇಕು. ಸಭೆಯು ದೇವರ ಸ್ವಸ್ಥತೆಯ ಕೇಂದ್ರವಾಗಿದೆ. ಈ ಉತ್ಪಾದಕ ಭವನದಿಂದ ದೇವರು ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಾನೆ.

**1. ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು:**

- ಕ್ರಿಸ್ತನು ನಮ್ಮ ಜೀವದ ಮೂಲ ಎಂದು ತಿಳಿಯುವುದರ ಮೂಲಕ ನಮಗೆ ಬಲ ಬರುತ್ತದೆ.
- ಜೀವಿಸುವ ದೇವರ ಸಾಮರ್ಥ್ಯವನ್ನು ತಿಳಿಯುವುದರಿಂದ ನಾವು ಸಭೆಯಲ್ಲಿ ಸ್ವಸ್ಥ ಮಾಡುವವರಾಗುತ್ತೇವೆ.
- ಕ್ರಿಸ್ತನನ್ನು ಅರಿಯುವುದರಿಂದ ದೇವ ಜನರನ್ನು ಪರಿವರ್ತಿಸಲು ಬೆಳೆಸಲು ಹಾಗೂ ಪೋಷಿಸಲು ನಮಗೆ ಸ್ವಾತಂತ್ರ್ಯತೆ ಕೊಡುತ್ತದೆ.



**2. ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು:**

- ಈ ಬಂಡೆಯು ಮಾನವನಾಗಿದ್ದಾನೆ ಮತ್ತು ಎಡಬಿಡದೆ ಬದಲಾಗುತ್ತಿರುತ್ತಾನೆ – ಆದರೆ ಎಂದಿಗೂ ಬದಲಾಗದ ಕ್ರಿಸ್ತನಂದ ಜೀವನದಲ್ಲಿ ನಾವು ನೆರವಾಗಬಹುದು.
- ಶಕ್ತಿಯುತ ಹಾಗೂ ಕ್ರೀಯಾ ಶೀಲ ಸಭೆಯ ವಿವಿಧ ವರಗಳನ್ನು ಹೊಂದಿರುವ ಜನರನ್ನು ಒಟ್ಟಿಗೆ ಪ್ರದರ್ಶಿಸುವಂಥದ್ದಾಗಿದೆ.
- ದೇವರ ಆತ್ಮನು ಸ್ವಸ್ಥತೆ ಹಾಗೂ ಪರಿಪೂರ್ಣತೆಯ ಮೂಲಕ ಸಭೆಯನ್ನು ಅಭಿವೃದ್ಧಿಗೊಳಿಸಲು ಸಹಾಯ ಮಾಡುತ್ತಾನೆ.
- ನಾವು ಗುರಿಯನ್ನು ತಲುಪಲು ಬಂಡೆಯು ಸಾಮರ್ಥ್ಯದ ಹಾಗೂ ಬಲವುಳ್ಳ ಗುರುತಾಗಿದೆ.

**3. ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು:**

- ಅಜೇಯ ಸಭೆ
- ಅಜಿತ ಸಭೆ
- ಸಭೆಯ ಇರುವಿಕೆಯನ್ನು ಯಾವ ಶಕ್ತಿಯಿಂದಲೂ ನಾಶಮಾಡಲು ಅಸಾಧ್ಯ.
- ನಾವು ಸ್ವಸ್ಥ ಪಡಿಸುವ ಸಾಮರ್ಥ್ಯವನ್ನು ಹಾಗೂ ದೇವರ ಸೃಷ್ಟಿಯನ್ನು ಕಾಪಾಡಿಕೊಂಡು ಹೋಗುವ ಸಭೆಯ ಅಂಗಗಳಾಗಿದ್ದೇವೆ.

**ಮುಕ್ತಾಯ (ಉಪ ಸಂಹಾರ)**

ಸಭೆಯು ಎಂದೂ ಸೋಲಿಸಲಾಗದ ನಿತ್ಯತ್ವದ ಶರೀರವನ್ನು ಹೊಂದಿದ ಜನರ ಗುಂಪಿನಿಂದ ಪ್ರತಿನಿಧಿಸಲ್ಪಟ್ಟು ಮತ್ತು ಯೇಸುಕ್ರಿಸ್ತನನ್ನು ತಮ್ಮ ಸ್ವಂತ ಪ್ರಭು ರಕ್ಷಕನನ್ನಾಗಿ ನಂಬುವವರಾಗಿದ್ದು, ಸಭೆಗೆ ಸಂಬಂಧ ಪಟ್ಟವರೆಂದು ಪರಿಗಣಿಸಲಾಗುತ್ತದೆ. ಈ ಸಭೆಯೆಂಬ ದೇಹದ ಮೂಲಕ ನೆರವಾಗುವುದು ನಮಗೆ ಸಿಕ್ಕ ಸದವಕಾಶವಾಗಿದೆ.

**ಪ್ರಾರ್ಥನೆ:**

ತಂದೆಯೇ, ನಿನ್ನ ಮಕ್ಕಳಾಗಿ ಪ್ರತಿಯೊಬ್ಬರಾದ ನಾವು ನಿನ್ನ ಮಗನ ಮೂಲಕ ಸ್ವಸ್ಥತೆಯ ಅನುಭವ ಹೊಂದವಂತೆ ಮಾಡಿದ್ದಕ್ಕಾಗಿ ನಿನ್ನನ್ನು ವಂದಿಸುತ್ತೇವೆ. ಸಭೆಯು ವಾಕ್ಯವನ್ನು ಸಾರುವುದರಲ್ಲಿಯೂ, ಕಲಿಸುವುದರಲ್ಲಿಯೂ ಮತ್ತು ಸ್ವಸ್ಥತೆ ಮಾಡುವಲ್ಲಿ ಬಲ ಪಡಿಸಬೇಕೆಂದು ಪ್ರಾರ್ಥಿಸುತ್ತೇವೆ. ಜನರಿಗಾಗಿ ಇರುವ ನಿನ್ನ ಯೋಜನೆಗಳನ್ನು ಕೇಳುವಂತೆ, ಅರ್ಥೈಸಿಕೊಳ್ಳುವಂತೆ ನಮಗೆ ಸಹಾಯ ಮಾಡು. ಸ್ವಸ್ಥತೆಯ ಸೇವೆಯಲ್ಲಿ ಎಲ್ಲಾ ಸಂದರ್ಭಗಳಲ್ಲೂ ಹಾಗೂ ಎಲ್ಲಾ

ಸವಾಲುಗಳನ್ನು ಜಯಿಸುವಂತೆ ನಮಗೆ ಸಹಾಯ ಮಾಡೆಂದು ಪ್ರಾರ್ಥಿಸುತ್ತೇವೆ. ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುತ್ತೇವೆ. ಆಮೆನ್.

9) **ಮಧ್ಯಸ್ತಿಕೆಯ ಪ್ರಾರ್ಥನೆ.**

ನಮ್ಮ ಪ್ರೀತಿಯುಳ್ಳ ಪರಲೋಕದ ತಂದೆಯೇ ನೀನು ನಮಗೆ ಕೊಟ್ಟಿರುವ ಈ ಲೋಕವನ್ನು ಅರ್ಥ ಮಾಡಿಕೊಳ್ಳಲು, ಆರೈಕೆ ಮಾಡಲು ಪೋಷಿಸಲು ನಮ್ಮನ್ನು ಸ್ವಸ್ಥಚಿತ್ತರನ್ನಾಗಿ ಸೃಷ್ಟಿಸಿದಕ್ಕಾಗಿ ನಿನ್ನನ್ನು ವಂದಿಸುತ್ತೇವೆ. ನಮ್ಮ ಜೀವನದ ಪ್ರಯಾಣದಲ್ಲಿ ಒಬ್ಬರನ್ನೊಬ್ಬರು, ಪಾಲನೆ ಆರೈಕೆ ಮಾಡುವಂತೆಯೂ ವಿಶೇಷವಾಗಿ ಯಾರಿಗೆ ಹೆಚ್ಚಿನ ಬೆಂಬಲ ಪಾಲನೆ ಅವಶ್ಯವಾಗಿದೆಯೋ ಅಂಥವರಿಗೆ ನೀಡಲು ನಮಗೆ ಸಹಾಯ ಮಾಡು,

**ಕರ್ತನೇ ನಮ್ಮನ್ನು ಕರುಣಿಸಿ ನಮ್ಮ ಪ್ರಾರ್ಥನೆಯನ್ನು ಕೇಳು.**

ಕೃಪೆಯುಳ್ಳ ಕರ್ತನೇ. ಪರಲೋಕದ ತಂದೆಯೇ, ದೇವ ಜನರಿಗಾಗಿ ನಿನಗಿರುವ ದೃಷ್ಟಿಕೋನ ಹಾಗೂ ಕನಸನ್ನು ಸಭೆಯು ಮುಂದುವರೆಸಿಕೊಂಡು ಹೋಗುವಂತೆ ಪ್ರಾರ್ಥಿಸುತ್ತೇವೆ. ನಿನ್ನ ಸ್ವಸ್ಥತೆಯ ಸಂದೇಶಕರಾಗಿಯೂ ಹಾಗೂ ಜನರನ್ನು ಪುನಃ ಬೆಳೆಸುವಂತೆ ನಿನ್ನ ಸಭೆಯನ್ನು ನಡೆಸು.

**ಕರ್ತನೇ, ನಮ್ಮನ್ನು ಕರುಣಿಸಿ ನಮ್ಮ ಪ್ರಾರ್ಥನೆಯನ್ನು ಕೇಳು**

ಕರ್ತನೇ ಸ್ವಸ್ಥತಾ ಸೇವೆಯ ಗುಂಪಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಭಿನ್ನ ರೀತಿಯಲ್ಲಿ ಸಹಾಯ ಮಾಡುವಂಥ ಪ್ರತಿ ವ್ಯಕ್ತಿಯಾಗಿ ಹಾಗೂ ಅವರೆಲ್ಲರು ದೇವ ಜನರ ಒಳತಿಗಾಗಿ ಒಟ್ಟಾಗಿ ಸೇವೆಸಲ್ಲಿಸುವಂತೆ ನಡಿಸೆಂದು ಪ್ರಾರ್ಥಿಸುತ್ತೇವೆ. ಅನಾರೋಗ್ಯದಲ್ಲಿರುವವರಿಗೆ ಚಿಕಿತ್ಸೆ ಕೊಡುವಂಥ ವೃತ್ತಿಪರ ಸೇವಕರಿಗಾಗಿ ಪ್ರಾರ್ಥಿಸುತ್ತೇವೆ. ಅವರಿಗೆ ಆಧಾರನಾಗಿದ್ದು ಅನಾರೋಗ್ಯಕ್ಕೆ ಕಾರಣವನ್ನು ಕಂಡು ಹಿಡಿಯುವ ನೈಪುಣ್ಯತೆಯನ್ನು ಅನುಗ್ರಹಿಸಿ ಉತ್ತಮ ಚಿಕಿತ್ಸೆ ನೀಡಿ ವಾಸಿ ಮಾಡುವ ಪ್ರಕ್ರಿಯೆಯಲ್ಲಿ ಸಹಾಯಕನಾಗಿರುವಂತೆ ಪ್ರಾರ್ಥಿಸುತ್ತೇವೆ.

**ಕರ್ತನೇ, ನಮ್ಮನ್ನು ಕರುಣಿಸಿ ನಮ್ಮ ಪ್ರಾರ್ಥನೆಯನ್ನು ಕೇಳು**

ಸರ್ವಶಕ್ತನಾದ ದೇವರೇ, ಕ್ರಿಶ್ಚಿಯನ್ ಮೆಡಿಕಲ್ ಅಸೋಸಿಯೇಶನ್ ಆಫ್ ಇಂಡಿಯಾ ಸಂಸ್ಥೆಗಾಗಿ ಪ್ರಾರ್ಥಿಸುತ್ತೇವೆ. ದೇಶದ ಉದ್ದ – ಅಗಲಕ್ಕೂ ಹರಡಿ ಅನಾರೋಗ್ಯ ಹಾಗೂ ದುಃಖ ನೋವಿನಿಂದ ಬಳಲುವವರಿಗೆ ನಿನ್ನ ಪ್ರೀತಿಯನ್ನು



ಪ್ರಚುರ ಪಡಿಸುತ್ತಿರುವ ಪ್ರತಿಯೊಬ್ಬ ಸದಸ್ಯರನ್ನು ಆಶೀರ್ವದಿಸು. ಸ್ವಸ್ಥತಾ ಸೇವೆಗೆ ಸಂಬಂಧಿತವಾಗಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಹೆಣಗಾಡುತ್ತಿರುವ ಪ್ರತಿಯೊಬ್ಬರಿಗೂ ಸಹಾಯ ಮಾಡಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇವೆ.

**ಕರ್ತನೇ, ನಮ್ಮನ್ನು ಕರುಣಿಸಿ ನಮ್ಮ ಪ್ರಾರ್ಥನೆಯನ್ನು ಕೇಳು**

ಭಾರತ ದೇಶದಲ್ಲಿ ಸಭೆಗಳಿಗೆ ಆರೋಗ್ಯ ಹಸ್ತವಾಗಿ ಕಾರ್ಯ ನಿರ್ವಹಿಸುತ್ತಿರುವ ಸಿ.ಎಂ.ಎ.ಐ ಗಾಗಿ ಪ್ರಾರ್ಥಿಸುತ್ತೇವೆ. ಈ ಸಂಸ್ಥೆ ಸಭೆಗಳ ಮೂಲಕ ಜನರಿಗೆ ಸಮೃದ್ಧ ಜೀವನವನ್ನು ಅನುಭವಿಸಲು ಅಡ್ಡಿಯಾಗಿರುವ ವಿಷಯಗಳನ್ನು ತಿಳಿಯ ಪಡಿಸಿ ಅವರು ಸಮೃದ್ಧ ಜೀವನವನ್ನು ಅನುಭವಿಸಲು ಸಹಾಯ ಮಾಡು. ನಿನ್ನ ಜನರ ಜೀವನದ ಗುಣಮಟ್ಟದಲ್ಲಿ ವ್ಯತ್ಯಾಸವನ್ನು ಕಂಡುಕೊಳ್ಳುವಂತೆ ಸಭೆಯು ಮಾಡುತ್ತಿರುವ ಸೇವೆಯನ್ನು ಆಶೀರ್ವದಿಸು.

**ಕರ್ತನೇ, ನಮ್ಮನ್ನು ಕರುಣಿಸಿ ನಮ್ಮ ಪ್ರಾರ್ಥನೆಯನ್ನು ಕೇಳು**

(ನಾಯಕರು ಇತರ ಪ್ರಾರ್ಥನಾ ಮನವಿಗಳನ್ನು ಕೂಡ ಇಲ್ಲಿ ಸೇರಿಸಬಹುದು, ಸಭಾಪಾಲಕರು ಪ್ರಾರ್ಥನೆಯೊಂದಿಗೆ ಮುಕ್ತಾಯಗೊಳಿಸತಕ್ಕದ್ದು.)

**ಹಾಡು (ಕಾಣಿಕೆ)**

(ಕರ್ತನ ಭೋಜನವನ್ನು ಆಚರಿಸುತ್ತಿದ್ದರೆ ಅದಕ್ಕೆ ಸಂಬಂಧಪಟ್ಟ ಆರಾಧನಾ ಕ್ರಮವನ್ನು ಮುಂದುವರಿಸತಕ್ಕದ್ದು ಹಾಗೂ ಮುಕ್ತಾಯ ಪ್ರಾರ್ಥನೆ ಮತ್ತು ಅಂತ್ಯಾಶೀರ್ವಾದದೊಂದಿಗೆ ಮುಗಿಸತಕ್ಕದ್ದು.)

ಸ್ವಸ್ಥತಾ ಸೇವಾ ಭಾನುವಾರದಂದು ಕೂಡಿಸಿದ ಕಾಣಿಕೆಯನ್ನು ಡಿ.ಡಿ.ಯ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಸಿ.ಎಂ.ಎ.ಐ. ಆಫೀಸ್ ಪ್ಲಾಟ್ ನಂ.2, ಎ–3, ಲೋಕಲ್ ಶಾಫಿಂಗ್ ಸೆಂಟರ್, ಜನಕಪುರಿ, ನ್ಯೂ ಡಿಲ್ಲಿ – 110058.

**ಈ ಆರಾಧನಾ ಕ್ರಮದ ಭಾಷಾಂತರ ಪ್ರತಿಗಳು**

www.cmai.org ನಲ್ಲಿ ಜನವರಿ 30, 2017ರ ನಂತರ ಲಭಿಸುವುದು, ನಿಮ್ಮ ಆಯ್ಕೆಯ ಭಾಷೆಯನ್ನು ಆರಿಸಿಕೊಂಡು ನಿಮ್ಮ ಸಭೆಗಳಲ್ಲಿ ಉಪಯೋಗಿಸಬೇಕಾಗಿ ವಿನಂತಿ.